KATK010001842026

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.

**Spl.C. 12/2026**

**ಫಿರ್ಯಾದುದಾರಃ** ರಾಜ್ಯ ಸರ್ಕಾರದ ಪರವಾಗಿ
D.C.R.E. ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರುಃ** 1) ರೇವಣ್ಣ.ಬಿ.ಜೆ. @ ರೇವಣ್ಣಸಿದ್ದಯ್ಯ ಬಿನ್ ಬಿನ್ ಗಂಗಣ್ಣ,
36 ವರ್ಷ, ಬ್ಯಾಲದಕೆರೆ, ಯಡಿಯೂರು ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

2) ಅಭಿಷೇಕ್ @ ಅಭಿಲಾಷ್,
ಬಿನ್ ವಿಜಯ್ ಕುಮಾರ್, 23 ವರ್ಷ,
ನಾಗಸಂದ್ರ, ಯಡಿಯೂರು ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

3) ಲಕ್ಕಮ್ಮ ಕೋಂ ವಿಜಯ್ ಕುಮಾರ್,
41 ವರ್ಷ, ನಾಗಸಂದ್ರ, ಯಡಿಯೂರು ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

4) ಭೀಮೇಶ್ @ ಭೂಮೇಶ್ ಬಿನ್ ಗಂಗಣ್ಣ,
37 ವರ್ಷ, ಬ್ಯಾಲದಕೆರೆ, ಯಡಿಯೂರು ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

## ದೋಷಾರೋಪಣೆ

ಎ.ನಾಗಿರೆಡ್ಡಿ, 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ.

ದಿನಾಂಕ 10.10.2025 ರಂದು ಸಂಜೆ 6.30 ಗಂಟೆಗೆ ಕುಣಿಗಲ್ ತಾಲ್ಲೂಕು ಯಡಿಯೂರು ಹೋಬಳಿ ಮಾಗಡಿಪಾಳ್ಯ ಬಸ್ ನಿಲ್ದಾಣದ ಬಳಿ ಸಾರ್ವಜನಿಕ ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ TATA Ace ವಾಹನ ಸಂಬಂಧಿಸಿದಂತೆ KA.05.F.6312 ವಾಹನದಲ್ಲಿ ಬಂದು ಯಡಿಯೂರು ನಾಡ ಕಚೇರಿಯ ಅಧಿಕಾರಿಗಳ ಬಳಿ ಬ್ಯಾಲದಕೆರೆ ಸ.ನಂ. 65 ರ ವಿಚಾರವಾಗಿ ಅದೇ ದಿನ ಸಂಜೆ 5 ಗಂಟೆಗೆ ಚಾಸಾ.5 ರವರ ಪರವಾಗಿ ಚಾಸಾ.1ರವರು ಮಾತನಾಡಿದ್ದಾರೆ ಎಂಬ ದ್ವೇಷದಿಂದ ಚಾಸಾ.1ರವರ ಕೊರಳಪಟ್ಟಿಯನ್ನು 1 ಮತ್ತು 2ನೇ ಆರೋಪಿತರಾದ ನೀವು ಏಕಾಏಕಿ ಹಿಡಿದು ಕೆಳಕ್ಕೆ ಕೆಡವಿಕೊಂಡು ಮೈಕೈಗೆ ನೋವುಂಟುಮಾಡಿ, 3 ಮತ್ತು 4ನೇ ಆರೋಪಿತರಾದ ನೀವು ಕಾಲಿನಿಂದ ತುಳಿದು ನೋವುಂಟುಮಾಡಿರುತ್ತೀರಿ. ಆದ್ದರಿಂದ, 1 ರಿಂದ 4ನೇ ಆರೋಪಿತರಾದ ನೀವು ಭಾ.ನ್ಯಾ.ಸಂ.ಕಲಂ. 115(2) ಸಹವಾಚಕ ಕಲಂ 3(5)ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀವು ಚಾಸಾ.1 ರವರ ಬಲಕಾಲಿಗೆ ದೊಣ್ಣೆಯಿಂದ ಹೊಡೆದು ನೋವುಂಟುಮಾಡಿರುತ್ತೀರಿ. ಆದ್ದರಿಂದ, 1 ರಿಂದ 4 ನೇ ಆರೋಪಿತರಾದ ನೀವು ಭಾ.ನ್ಯಾ.ಸಂ.ಕಲಂ.118(1) ಸಹವಾಚಕ ಕಲಂ 3(5)ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ 3 ಮತ್ತು 4 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ಏ ಹೊಲೆಯ ನನ್ನ ಮಗನೇ, ನೀನು ನಮ್ಮ ವಿರುದ್ಧ ಸಾಕ್ಷಿ ಹೇಳಲು ಬರುತ್ತೀಯಾ, ಲೇ ಸೂಳೇ ಮಗನೇ, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಅಲ್ಲದೇ 1 ರಿಂದ 4 ನೇ ಆರೋಪಿತರಾದ ನೀವು ಚಾಸಾ.2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ತಳ್ಳಾಡಿರುತ್ತೀರಿ. ಆದ್ದರಿಂದ, 1 ರಿಂದ 4 ನೇ ಆರೋಪಿತರಾದ ನೀವು ಭಾ.ನ್ಯಾ.ಸಂ.ಕಲಂ.352 ಸಹವಾಚಕ ಕಲಂ 3(5)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಚಾಸಾ.2 ರವರನ್ನು ಕೈಹಿಡಿದು ತಳ್ಳಾಡಿ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಿ. ಆದ್ದರಿಂದ, 1 ರಿಂದ 4 ನೇ ಆರೋಪಿತರಾದ ನೀವು ಭಾ.ನ್ಯಾ.ಸಂ.ಕಲಂ.74 ಸಹವಾಚಕ ಕಲಂ 3(5) ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ)

ಕಾಯ್ದೆಯ ಕಲಂ 3(1)(w)(i) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ನಿಮ್ಮ ಎರಡೂ ಕಾಲುಗಳನ್ನು ತುಂಡು ತುಂಡಾಗಿ ಕತ್ತರಿಸಿ ಹಾಕುತ್ತೇವೆ ಎಂದು, ನಂತರ ಚಾಸಾ.1 ಮತ್ತು 2 ರವರನ್ನು TATA Ace ವಾಹನದಿಂದ ಗುದ್ದಿಸಿ ಸಾಯಿಸಿ ಸರ್ಕಾರಿ ಗೋಮಾಳ ಸ,ನಂ.65 ರಲ್ಲಿ ಹೂತುಹಾಕುತ್ತೇವೆಂದು ಪ್ರಾಣ ಬೆದರಿಕೆಯನ್ನು ಹಾಕಿರುತ್ತೀರಿ. ಆದ್ದರಿಂದ, 1 ರಿಂದ 4 ನೇ ಆರೋಪಿತರಾದ ನೀವು ಭಾ.ನ್ಯಾ.ಸಂ.ಕಲಂ.351(2) ಸಹವಾಚಕ ಕಲಂ 3(5)ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಚಾಸಾ.1 ಮತ್ತು 2 ರವರು ಪರಿಶಿಷ್ಟ ಆದಿದ್ರಾವಿಡ ಜನಾಂಗಕ್ಕೆ ಸೇರಿರುತ್ತಾರೆ ಎಂದು ಗೊತ್ತಿದ್ದರೂ ಸಹ ಚಾಸಾ.1 ರವರಿಗೆ ಏ ಹೊಲೆಯ ನನ್ನ ಮಗನೇ, ನೀನು ನಮ್ಮ ವಿರುದ್ದ ಸಾಕ್ಷಿ ಹೇಳಲು ಬರುತ್ತೀಯಾ, ಲೇ ಸೂಳೇ ಮಗನೇ, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಸಾರ್ವಜನಿಕವಾಗಿ ಬೈದು ಜಾತಿ ನಿಂದನೆ ಮಾಡಿರುತ್ತೀರಿ. ಆದ್ದರಿಂದ, 1 ರಿಂದ 4 ನೇ ಆರೋಪಿತರಾದ ನೀವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(1)(r)(s) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿತರಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 08 ನೇ ಜೂನ್ 2026.**

( **ಎ.ನಾಗಿರೆಡ್ಡಿ** )
3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.